

ಬ್ರುಸೆಲ್ಸ್ ನಗರದ ವಸ್ತುಸಂಗ್ರಹಾಲಯ




ಬ್ರುಸೆಲ್ಸ್‌ನ ಒಂದು ರಸ್ತೆ



ಬ್ರುಸೆಲ್ಸ್ ನಗರದ ಹಾದಿಬದಿಯೊಂದರ ಪ್ರತಿಮೆ

ಒಕ್ಕೂಟದ ದೇಶಗಳ ಅನೇಕ ಆಡಳಿತ ಕಚೇರಿಗಳು ಇರುವುದರಿಂದ ಬ್ರುಸೆಲ್ಸ್ ಅನ್ನು ಯುರೋಪಿನ ರಾಜಧಾನಿ ಎಂದೂ, ಯುರೋಪಿನ ಹೃದಯ ಎಂದೂ ಕರೆಯುವುದುಂಟು. ನ್ಯಾಟೋದ ಮುಖ್ಯ ಕಚೇರಿ, ಬೆಲ್ಜಿಯಂ ನ್ಯಾಷನಲ್ ಬ್ಯಾಂಕ್, ನಾಣ್ಯ ಮುದ್ರಣಾಲಯ ಸೇರಿದಂತೆ ಪ್ರಮುಖ ಕಚೇರಿಗಳು ಅಲ್ಲಿವೆ. ಬ್ರುಸೆಲ್ಸ್ ನಗರ ಅನೇಕ ಬಾರಿ ಜಾಗತಿಕ ವಾಣಿಜ್ಯ ಪ್ರದರ್ಶನಗಳಿಗೆ ಆತಿಥ್ಯ ವಹಿಸಿದ ಹೆಗ್ಗಳಿಕೆ ಹೊಂದಿದೆ.

ಕಲಾವಿದ ಜೆರೋಮ್ ಡುಕ್ಯುಸ್ನೋಯ್ ರಚಿಸಿದ 'ಮನ್ನೆಕೆನ್ ಪಿಸ್' ಕಲಾಕೃತಿ, 'ಆಟೋಮಿಯಮ್' ಎಂಬ ವಿಶಿಷ್ಟ ಕಟ್ಟಡ, ಗ್ರಾಂಡ್ ಪ್ಲೇಸ್, ರಾಯಲ್ ಪ್ಯಾಲೇಸ್, ಸಂತ ಮೈಕೆಲನ ಚರ್ಚ್ ಮತ್ತು ವಸ್ತು ಸಂಗ್ರಹಾಲಯಗಳು ಬ್ರುಸೆಲ್ಸ್‌ನಲ್ಲಿ ನೋಡಬೇಕಾದ ಸ್ಥಳಗಳು. 'ಕಾಮಿಕ್ಸ್ ರಾಜಧಾನಿ' ಎಂದೂ ಬ್ರುಸೆಲ್ಸ್ ಕರೆಸಿಕೊಂಡಿದೆ. ಹಲವು ಸ್ಥಳಗಳನ್ನು ನಡೆದು ನೋಡಬಹುದು.

## ಗ್ರಾಂಡ್ ಪ್ಲೇಸ್

ಬ್ರುಸೆಲ್ಸ್ ನಗರದ ಹೃದಯ ಭಾಗದಲ್ಲಿರುವ ಗ್ರಾಂಡ್ ಪ್ಲೇಸ್ ಯುರೋಪಿನ ಸುಂದರ ಚೌಕಗಳಲ್ಲಿ ಒಂದೆಂದು ಪರಿಗಣಿತವಾಗಿದೆ. 1998ರಲ್ಲಿ ವಿಶ್ವ ಪಾರಂಪರಿಕ ಸ್ಥಳವೆಂಬ ಮಾನ್ಯತೆಯನ್ನೂ ಪಡೆದಿದೆ. ಬರೋಕ್, ಗೋಥಿಕ್ ಮತ್ತು 14ನೇ ಲೂಯಿಸ್ ಕಾಲದ ವಾಸ್ತುರಚನೆಗಳಿಂದಾಗಿ ಈ ಚೌಕಕ್ಕೆ ಐತಿಹಾಸಿಕ ಮಹತ್ವವಿದೆ. 1956ರವರೆಗೂ ಈ ಚೌಕ ಮಾರುಕಟ್ಟೆಯಾಗಿತ್ತು. ನಗರ ಬೆಳೆದಂತೆ ಮಾರುಕಟ್ಟೆ ಸ್ಥಳಾಂತರಗೊಂಡಿತು. ಪ್ರವಾಸಿಗರು ಅಪಾರ ಸಂಖ್ಯೆಯಲ್ಲಿ ನೆರೆಯುವುದರಿಂದ ಸದಾ ಜನರಿಂದ ಗಿಜಿಗುಡುತ್ತಿರುತ್ತದೆ.

ಮೊದಲ ನೋಟಕ್ಕೆ ಚರ್ಚ್ ಅಥವಾ ಅರಮನೆ ಎಂಬ ಅನುಮಾನ ಮೂಡುವ ಪುರಸಭೆಯ ಕಟ್ಟಡವು ಗೋಥಿಕ್ ಶೈಲಿಯಲ್ಲಿದೆ. 96 ಮೀಟರ್ ಎತ್ತರವಿರುವ ಶಿಖರದ ತುದಿಯಲ್ಲಿ ಐದು ಮೀಟರ್ ಎತ್ತರವಿರುವ ಸೈಂಟ್ ಮೈಕಲ್‌ನ ಲೋಹದ ಪ್ರತಿಮೆಯಿದೆ. ಈ ಕಟ್ಟಡದ ಎದುರು 'ಕಿಂಗ್ಸ್‌ಹೌಸ್' ಕಟ್ಟಡದಲ್ಲಿ ಬ್ರುಸೆಲ್ಸ್‌ನ ವಸ್ತು ಸಂಗ್ರಹಾಲಯವಿದೆ. 12ನೇ ಶತಮಾನದಲ್ಲಿದ್ದ ಮರದ ಕಟ್ಟಡವನ್ನು ಮುಂದೆ 15ನೇ ಶತಮಾನದಲ್ಲಿ ಕಲ್ಲಿನ ಗೋಥಿಕ್ ಶೈಲಿಯ ಆಕರ್ಷಕ ವಾಸ್ತುಶಿಲ್ಪವಾಗಿ ಮರು ನಿರ್ಮಾಣ ಮಾಡಲಾಗಿದೆ. 1873ರಲ್ಲಿ ಮತ್ತೊಮ್ಮೆ ಅದರ ನವೀಕರಣವಾಗಿದೆ. ಗ್ರಾಂಡ್ ಪ್ಲೇಸ್ ಚೌಕದಲ್ಲಿ ಎರಡು ವರ್ಷಕ್ಕೊಮ್ಮೆ ಆಗಸ್ಟ್ ತಿಂಗಳಿನಲ್ಲಿ ಲಕ್ಷಾಂತರ ಹೂಗಳನ್ನು ಬಳಸಿ ಬೃಹತ್ ಕಾರ್ಪೆಟ್ ಸಿದ್ಧಪಡಿಸಲಾಗುತ್ತದೆ. ಕೆಲವು ದಿನಗಳ ಕಾಲ ಮಾತ್ರ ಇರುವ ಕಾರ್ಪೆಟ್‌ನ ಸೌಂದರ್ಯವನ್ನು ನೋಡಲೆಂದೇ ಅಸಂಖ್ಯಾತ ಪ್ರವಾಸಿಗರು ಬ್ರುಸೆಲ್ಸ್‌ಗೆ ಆಗಮಿಸುತ್ತಾರೆ.